Telefax:0091-080-23330984
Email.registrar@uasbangalore.edu.in
Mob:9449866901

Phone:91-080-23330984
23330153 Extn.205/210

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕುಲಸಚಿವರ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು – 560 065

ಸಂಖ್ಯೆ.ಕು/ಸಕುಸ/ಅಧಿಕ್ಷಕರು/ಕೃಕೋ/2021-22 ದಿನಾಂಕ: 20.09.2021

## ಅಧಿಸೂಚನೆ

### ಕರ್ನಾಟಕ ಕೃಷಿ/ ತೋಟಗಾರಿಕೆ / ಪಶು ಸಂಗೋಪನೆ ವಿಶ್ವ ವಿದ್ಯಾಲಯಗಳು
### 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಕೃಷಿಕರಕೋಟಾದಡಿಯಲ್ಲಿ ಪ್ರವೇಶಾತಿ ಸಂಬಂಧ ದಾಖಲಾತಿಗಳ ಪರಿಶೀಲನೆ

ಪ್ರಸ್ತುತ ರಾಜ್ಯ ವ್ಯಾಪಿ ಕೋವಿಡ್-19 ಕಾರಣವಾಗಿ, ಪ್ರಸಕ್ತ 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಕೃಷಿಕರ ಕೋಟಾದಡಿಯಲ್ಲಿ (50%) ಪ್ರವೇಶಾತಿ ಸಂಬಂಧ ಅಭ್ಯರ್ಥಿಗಳು ಸಲ್ಲಿಸುವ ದಾಖಲಾತಿಗಳನ್ನು ಭೌತಿಕವಾಗಿ ಪರಿಶೀಲಿಸುವ ಬದಲಾಗಿ, ಆನ್‌ಲೈನ್ ಪರಿಶೀಲನೆ ಕೈಗೊಳ್ಳಲಾಗುವುದು. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸುವಾಗ ಯಾವ ಕೇಂದ್ರದಲ್ಲಿ ದಾಖಲಾತಿ ಪರಿಶೀಲನೆಗೆ ಆಯ್ಕೆ ಮಾಡಲಾಗಿರುತ್ತದೆಯೋ ಅದೇ ಕೇಂದ್ರಗಳಲ್ಲಿ ಸಂಬಂಧಿತ ವಿಶ್ವವಿದ್ಯಾನಿಲಯಗಳಿಂದ ನಿಯೋಜಿಸಿದ ಸಮಿತಿ ದಾಖಲಾತಿಗಳನ್ನು ಪರಿಶೀಲನೆ ಮಾಡುತ್ತದೆ.

### ಆನ್‌ಲೈನ್ ಪರಿಶೀಲನೆಗಾಗಿ ದಾಖಲೆಗಳನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ ಮಾರ್ಗಸೂಚಿಗಳು

1. ಆನ್‌ಲೈನ್ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲದಾಖಲಾತಿಗಳು:
   - ಅ) CET ಪರೀಕ್ಷಾ ಪ್ರವೇಶ ಪತ್ರ (admission Ticket)
   - ಆ) ವ್ಯವಸಾಯಗಾರರ ಪ್ರಮಾಣ ಪತ್ರ- 3 (ಅವಿಭಾಜ್ಯ ಕುಟುಂಬವಾದಲ್ಲಿ ಪೂರಕವಾಗಿ ವಂಶವೃಕ್ಷ ಪ್ರಮಾಣ ಪತ್ರ ಕೃಷಿಕರ ಕೋಟಾದಡಿಯಲ್ಲಿ ಅರ್ಜಿಯನ್ನು ಪರಿಗಣಿಸಲು)
   - ಇ) ವ್ಯವಸಾಯದ / ಕೃಷಿ ಆದಾಯದ ಪ್ರಮಾಣ ಪತ್ರ
   - ಈ) ವೇತನದೃಢೀಕರಣ ಪ್ರಮಾಣ ಪತ್ರ- 4 (ಜೊತೆಗೆ ನೌಕರಿಯಿದ್ದಲ್ಲಿ)
   - ಉ) ಖಾಸಗಿ ವೃತ್ತಿಯಿಂದಆದಾಯದ ಪತ್ರ- 5 (ಜೊತೆಗೆ ಸ್ವಂತ ವ್ಯವಹಾರವಿದ್ದಲ್ಲಿ)
   - ಊ) ಅಫಿಡವಿಟ್ (ಕೇವಲ 1ಇ, 1ಈ & 1ಉ ಒಟ್ಟು ಆದಾಯಕ್ಕೆ ಸಂಬಂಧಿಸಿದಂತೆ ಮಾತ್ರ, First party will be Candidate & second party will be respective University)
   - ಈ) ಮೇಲಿನ ದಾಖಲಾತಿಗಳನ್ನು ಎಲ್ಲಾ ವಿಶ್ವವಿದ್ಯಾನಿಲಯಗಳ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜಾಲತಾಣಗಳಲ್ಲಿ ಕಾಣಿಸಿರುವ ಕೊಂಡಿಗಳಲ್ಲಿ ಲಾಗ್‌ಇನ್ ಮಾಡಿ ಸಲ್ಲಿಸಬಹುದು.

**2. ಪ್ರಮಾಣ ಪತ್ರ-3ರನ್ನು ಆರ್ ಡಿ ನಂಬರ್ ಇಲ್ಲದೆ ಅಪ್ ಲೋಡ್ ಮಾಡುವಂತಹ ಅಭ್ಯರ್ಥಿಗಳು ಸಿ ಇ ಟಿ ಸಂಖ್ಯೆಯ ಜೊತೆಗೆ ತಹಸಿಲ್ದಾರರ ಕಛೇರಿಗೆ ಗಣಕೀಕೃತ ಕೃಷಿಕರ ಪ್ರಮಾಣ ಪತ್ರಕ್ಕೆ ಅರ್ಜಿಸಲ್ಲಿಸಿರುವುದಕ್ಕೆ ನೀಡಿರುವ ಪುರಾವೆಯ ಸಂಖ್ಯೆಯನ್ನು (Acknowledgment No.) ಕಡ್ಡಾಯವಾಗಿ ನಮೂದಿಸಬೇಕು. ಹಾಗೂ ಪ್ರವೇಶಾತಿಯ (Admission) ಸಂದರ್ಭದಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದ ಗಣಕೀಕೃತ ಕೃಷಿಕರ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಪಟ್ಟ ಕಾಲೇಜು / ಕೃಷಿ ವಿಶ್ವವಿದ್ಯಾನಿಲಯಗಳಿಗೆ ಸಲ್ಲಿಸಬೇಕು ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳು ಕೃಷಿ ಕೋಟಾದಡಿ ಪಡೆದ ಪ್ರವೇಶಾತಿಯನ್ನು ರದ್ದುಮಾಡಲಾಗುವುದು**

3. ಅಭ್ಯರ್ಥಿಗಳು ಆನ್‌ಲೈನ್ ಪರಿಶೀಲನೆಗೆ ಸಲ್ಲಿಸಬೇಕಾದ ರೂ.200/- ಸಾಮಾನ್ಯ ಮತ್ತು ಇತರೆ ರೂ. 100/- ಪ.ಜಾ/ಪ.ಪ/ಪ್ರವರ್ಗ-1 ಶುಲ್ಕವನ್ನು ಕೃಷಿ ವಿಶ್ವವಿದ್ಯಾನಿಲಯಗಳ ಅಧಿಕೃತ ಜಾಲತಾಣದಲ್ಲಿ ನೀಡಿರುವ ಆನ್‌ಲೈನ್ ಸೌಲಭ್ಯ ಮೂಲಕ ತುಂಬಬಹುದು. ಶುಲ್ಕ ತುಂಬಿದ ನಂತರವೇ ಶುಲ್ಕ ರಸೀತಿ ಹಾಗೂ ದಾಖಲಾತಿಗಳನ್ನು ಸಲ್ಲಿಸಿದ ಮಾಹಿತಿಯನ್ನು ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯ. ಶುಲ್ಕ ತುಂಬದೇ ಇದ್ದ ಪಕ್ಷದಲ್ಲಿ, ಸಮಿತಿಗೆ ದಾಖಲಾತಿಗಳ ಪರಿಶೀಲನೆ ಸಾಧ್ಯವಾಗುವುದಿಲ್ಲ.

### ಆನ್‌ಲೈನ್ ದಾಖಲಾತಿಗಳ ಪರಿಶೀಲನಾ ಪ್ರಕ್ರಿಯೆಯ ವೇಳಾಪಟ್ಟಿ

1. ಅಭ್ಯರ್ಥಿಗಳು ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವುದು – ದಿನಾಂಕ: 22.09.2021 (ಮಧ್ಯಾಹ್ನ. 2.00 ಗಂಟೆಯ ನಂತರ) ರಿಂದ ದಿನಾಂಕ: 28.09.2021 ರ (ಮಧ್ಯರಾತ್ರಿ 12.00 ಗಂಟೆ)ವರೆಗೆ.
2. ಆನ್‌ಲೈನ್ ನಲ್ಲಿ ದಾಖಲಾತಿಗಳ ಪರಿಶೀಲನೆ –ಆಯಾ ಕೇಂದ್ರಗಳಲ್ಲಿ ನಿಯೋಜಿಸಿದ ಸಮಿತಿ ಸದಸ್ಯರಿಂದ (ಆಯಾ ವಿಶ್ವವಿದ್ಯಾನಿಲಯಗಳು ನಿಯೋಜಿಸಿದ) – ದಿನಾಂಕ 23.09.2021 ರಿಂದ ದಿನಾಂಕ 29.09.2021ರವರೆಗೆ.
3. ಕೃಷಿ ಕೋಟಾದಡಿ ಪರಿಗಣಿಸಲಾಗುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಎಲ್ಲಾ ಕೇಂದ್ರಗಳಿಂದ ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರಿಗೆದಿನಾಂಕ: 30.09.2021 (ಮಧ್ಯಾಹ್ನ. 3.00 ಗಂಟೆ) ರೊಳಗೆ ಸಲ್ಲಿಸುವುದು.

***ಹೆಚ್ಚಿನ ಮಾಹಿತಿಗಾಗಿ ಮತ್ತು ದಾಖಲಾತಿಗಳ ಅಪ್‌ಲೋಡ್‌ಗೆ ಈ ಕೆಳಗೆ ನೀಡಿರುವ ಅಧಿಕೃತ ಅಂತರ್ಜಾಲಗಳನ್ನು ಆಸಕ್ತ ಅರ್ಹ ಅಭ್ಯರ್ಥಿಗಳು ಸಂಪರ್ಕಿಸುವುದು:** 1. www.uasbanglore.edu.in 2. www.uasd.edu.in 3. www.uhsbagalkot.edu.in 4. www.uahs.in 5. www.uasraichur.edu.in 6. www.kvafsu.edu.in 7.kea.kar.nic.in

ಆದೇಶದ ಮೇರೆಗೆ

ಕುಲಸಚಿವರು, ಕೃವಿವಿ ಬೆಂಗಳೂರು
ರಾಜ್ಯದ ಎಲ್ಲಾ ಕೃಷಿ ಮತ್ತು ಕೃಷಿ ಸಂಬಂಧಿತ
ವಿಶ್ವವಿದ್ಯಾನಿಲಯಗಳ ಪರವಾಗಿ